**ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**
**#16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,**
**ವಸಂತನಗರ, ಬೆಂಗಳೂರು-560052 ಇವರ ಮುಂದೆ**

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003ರ ಪ್ರಕರಣ 61, 62 ಮತ್ತು 64ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಆರ್ಥಿಕ ವರ್ಷ 2017-18ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ(ಎ.ಪಿ.ಆರ್) ಮತ್ತು 2019-20, 2020-21 ಮತ್ತು 2021-22 ರ ಆರ್ಥಿಕ ವರ್ಷಕ್ಕೆ ಬಹು ವಾರ್ಷಿಕ ಜಕಾತಿ ನಿಯಮಾವಳಿ ಅನುಸಾರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್), ನಿರೀಕ್ಷಿತ ಆದಾಯ (ಇ.ಆರ್.ಸಿ) ಅನುಮೋದನೆಗಾಗಿ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಕೆ ವಿಷಯದಲ್ಲಿ

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,**
**ಕಾವೇರಿ ಭವನ, ಬೆಂಗಳೂರು-560009.** ......**ಅರ್ಜಿದಾರರು**

## ಅಧಿಸೂಚನೆ

**ಕವಿಪ್ರನಿನಿಯ ಎಪಿಆರ್ 2017-18 ಮತ್ತು ಎ.ಆರ್.ಆರ್ 2019-20, 2020-21 ಮತ್ತು 2021-22ರ ಬಗ್ಗೆ.**

**1.0** ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಾಮವಳಿ 2006 ರ ಪ್ರಕಾರ ಆರ್ಥಿಕ ವರ್ಷ 2017-18 ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಆರ್ಥಿಕ ವರ್ಷ 2019-20, 2020-21 ಮತ್ತು 2021-22 ರ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಹಾಗು ವಿದ್ಯುತ್ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಗೌರವಾನ್ವಿತ ಆಯೋಗವು ಇವುಗಳ ಪರಿಷ್ಕರಣೆಯ ಬಗ್ಗೆ ಪರಿಶೀಲಿಸುತ್ತಿದೆ.

**2.0** ಆರ್ಥಿಕ ವರ್ಷ 2017-18 ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯಲ್ಲಿ ವಾರ್ಷಿಕ ಆದಾಯದ ಅಗತ್ಯತೆಯು (ವೆಚ್ಚ) ₹3277.35 ಕೋಟಿಯಾಗಿರುತ್ತದೆ. ಅದರಲ್ಲಿ ₹417.82 ಕೋಟಿ ವ್ಯತ್ಯಾಸ ಬಂದಿರುತ್ತದೆ. ಸದರಿ ವ್ಯತ್ಯಾಸವನ್ನು 2019-20 ರಲ್ಲಿ ವಸೂಲಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಿದೆ.

**3.0** ಕವಿಪ್ರನಿನಿಯ ಆರ್ಥಿಕ ವರ್ಷ 2019-20, 2020-21 ಮತ್ತು 2021-22 ರ ಪ್ರಸ್ತುತ ಆರ್ಥಿಕ ವಾರ್ಷಿಕ ಆದಾಯದ ಅಗತ್ಯತೆಯಾದ ₹ 4175.82, ₹ 4848.07, ₹ 5454.56 ಕೋಟಿಗಳನ್ನು ಪ್ರಸ್ತಾವಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ, ಕ್ರಮವಾಗಿ ₹ 161766/-, ₹ 157698/-, ₹ 155045/- ರಂತೆ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲಿ ಮಾಡಲು ಪ್ರಸ್ತಾಪಿಸಿದೆ.

**4.0** ಪ್ರಸ್ತುತ, ಆಯೋಗ ಅನುಮೋದಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ ₹115776/- ಇರುತ್ತದೆ.

**5.0** ವಿದ್ಯುಚ್ಛಕ್ತಿ ಅಧಿನಿಯಮ 2003 ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ದರ) ನಿಯಾಮವಳಿ 2000ರ ಪ್ರಕಾರ ಮೇಲಿನ ಪ್ರಸ್ತಾವನೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ **ಆರು ಸೆಟ್‌ಗಳೊಂದಿಗೆ** ಶಪಥ ಪತ್ರ (ಅಫಿಡವಿಟ್) ದ ಜೊತೆಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **ಮೂವತ್ತು** ದಿನಗಳ ಒಳಗಾಗಿ **ಸ್ವೀಕರಣ ಅಧಿಕಾರಿ, ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-560052** ಅವರಿಗೆ ಸಲ್ಲಿಸಬಹುದು..

**6.0** ಆಸಕ್ತಿ ಇರುವವರು ಪರಾಮರ್ಶೆಗಾಗಿ ಅಥವಾ ಕೊಳ್ಳಲು ಇಚ್ಛಿಸಿದಲ್ಲಿ ಎಪಿಆರ್ ಮತ್ತು ಬಹು ವಾರ್ಷಿಕ ದರದ ಪ್ರಸ್ತಾವನೆಯ ಪ್ರತಿಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮತ್ತು ವಿಸಕಂಗಳ ಈ ಕೆಳಕಂಡ ಕಛೇರಿಗಳಲ್ಲಿ ಲಭ್ಯವಿರುತ್ತದೆ.

1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುತ್), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಸಾರ್ವಜನಿಕ ಸಂಪರ್ಕ ಅಧಿಕಾರಿ, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಹಾಗು**
3. **ವಿದ್ಯುತ್ ಸರಬರಾಜು ಕಂಪನಿಗಳ ನಿಗಮ ಕಾರ್ಯಾಲಯ ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

**7.0** ಎಪಿಆರ್/ಎಆರ್‌ಆರ್ ಪ್ರತಿಗಳನ್ನು ಕೊಳ್ಳಲು ಇಚ್ಛಿಸುವವರು ಎಪಿಆರ್ ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ **₹ 97/-** ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **₹ 96/-** ರಂತೆ ಮತ್ತು ಎಆರ್‌ಆರ್ ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ **₹ 201/-** ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **₹ 195/-** ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ **₹ 1/-** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು** ಕೆಲಸದ ದಿನಗಳೊಳಗಾಗಿ ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್ **www.kptcl.com** ನಲ್ಲಿ ಸಹ ಲಭ್ಯವಿರುತ್ತದೆ.

**8.0** ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ಅಧಿಸೂಚನೆ ಹೊರಡಿಸಿದ **30** ದಿನಗಳಲ್ಲಿ ನೇರವಾಗಿ **ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ** ಕಛೇರಿಗೆ ಕಳುಹಿಸಬೇಕು. ಅನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಈ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿದ ಆಕ್ಷೇಪಣೆಗಳ ಪ್ರತಿಯನ್ನು ನೇರವಾಗಿ ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**

**ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560 009.**